**ಪಾಠ–5** **ಅಕ್ಟೋಬರ್ 24–30**

# ಯೇಸು: ಒಬ್ಬ ಶ್ರೇಷ್ಠ ಶಿಕ್ಷಕ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಅಧ್ಯಯನಕ್ಕಾಗಿ ಓದಿರಿ :** ಇಬ್ರಿ 1:1–4; 2 ಕೊರಿಂಥ 4:1–6; ಯೋಹಾನ 1:14,18; 14:1–14; ಫಿಲಿಪ್ಪಿ 2:1–11; 2 ಕೊರಿಂಥ 5:16–21.

**ಸ್ಮರಣ ವಾಕ್ಯ : "ಯಾಕೆಂದರೆ ಕತ್ತಲೆಯೊಳಗಿಂದ ಬೆಳಕು ಹೊಳೆಯಲಿ ಎಂದು ಹೇಳಿದ ದೇವರು ತಾನೇ ಯೇಸುಕ್ರಿಸ್ತನ ಮುಖದಲ್ಲಿ ತೋರುವ ದೇವ ಪ್ರಭಾವ ಜ್ಞಾನವೆಂಬ ಪ್ರಕಾಶವು ಅನೇಕರಿಗೆ ಉಂಟಾಗುವುದಕ್ಕಾಗಿ ನಮ್ಮ ಹೃದಯಗಳಲ್ಲಿ ಹೊಳೆದನು** (2 ಕೊರಿಂಥ 4:6).

"ಬಿಲ್ಲಿ ಗ್ರಾಹಮ್ ಒಮ್ಮೆ ಮಿಲ್ಟ್ರಿ ಆಸ್ಪತ್ರೆಗೆ, ಮಿಲ್ಟ್ರಿ ಜನರಲ್ ಭೇಟಿಕೊಟ್ಟ ಸಂದರ್ಭದ ಕಥೆ ಹೇಳಿದ್ದರು. ಅಲ್ಲಿ ಸೈನಿಕರುಗಳನ್ನು ಅವರ ಜನರಲ್ ಭೇಟಿ ಮಾಡಿದ್ದರು. ಒಬ್ಬ ಯುವ ಸೈನಿಕ ಮೋಟಾರುಗಾಡಿಯಲ್ಲಿ ಮುಖಾನೆ ಮಲಗಿದ್ದನು. ಒಬ್ಬ ವೈದ್ಯ ಗ್ರಾಹಮ್‌ರವರ ಕಿವಿಯಲ್ಲಿ– "ಈ ಯುವ ಸೈನಿಕ ಮತ್ತೆ ಎದ್ದು ಓಡಾಡಲಾರನು ಎಂದು ನನಗನ್ನಿಸುತ್ತದೆ" ಎಂದು ಹೇಳಿದನು. ಆ ಯುವ ಸೈನಿಕ, ತನ್ನ ಮುಖಂಡನಾದ ಜನರಲ್ ಮುಂದೆ ಒಂದು ಬೇಡಿಕೆಯಿಟ್ಟನು– "ಸಾರ್...... ನಾನು ನಿನ್ನ ಪರವಾಗಿ ಯುದ್ಧ ಮಾಡಿದೆನು, ಆದರೆ ನಾನು ನಿನ್ನ ಮುಖ ಎಂದೂ ನೋಡಿಲ್ಲ. ಈಗಲಾದರೂ ನಾನು ನಿನ್ನ ಮುಖವನ್ನು ನೋಡ

---

* **ಅಕ್ಟೋಬರ್ 31ರ ಸಬ್ಬತ್ತಿಗೆ ಈ ಪಾಠವನ್ನು ಅಧ್ಯಯನ ಮಾಡಿ ಸಿದ್ಧಪಡಿಸಿಕೊಳ್ಳಿರಿ.**

ಬಹುದೇ?" ಜನರಲ್ ತನ್ನ ವಾಹನದಿಂದ ಇಳಿದು ಬಂದನು. ಆ ಯುವ ಸೈನಿಕ ಮುಖಾನೆ ಮಲಗಿದ್ದ ಮೋಟಾರು ಗಾಡಿಯೊಳಗೆ ತನ್ನ ತಲೆ ಹಾಕಿ, ಆ ಯುವ ಸೈನಿಕನನ್ನು ಮಾತಾಡಿದನು. ಗ್ರಾಹಮ್ ನೋಡುತ್ತಿದ್ದಾಗ, ಆ ಯುವ ಸೈನಿಕನ ಆನಂದಬಾಷ್ಪ, ಜನರಲ್‌ನ ಮುಖದ ಮೇಲೆ ಉದರುತ್ತಿದ್ದದ್ದು ಕಾಣಿಸಿತು.

ಯೇಸುಕ್ರಿಸ್ತನು ಜನಿಸಿದಾಗ, ಈ ಯುವ ಸೈನಿಕನಂತೆ ಮಾನವ ಮುಖಾನೆ ಮಲಗಿದ್ದ, ರಕ್ತ ಸುರಿಸುತ್ತಿದ್ದ. ರೋಗ ಗುಣಪಡಿಸುವ ದೇವರ ಮುಖ ದರ್ಶನ ಮಾಡಲು ಬಯಸುತ್ತಿದ್ದ. ಇಡೀ ಮಾನವ ಸಂಕುಲವೇ– "ಓ! ದೇವರೇ, ನಾವು ನಿನ್ನ ಮುಖವನ್ನೂ ದರ್ಶನಮಾಡಬಹುದೇ?" ಎಂದು ಬೇಡುತ್ತಿತ್ತು. ದೇವರು ತನ್ನ ಮಗನನ್ನು ಈ ಗ್ರಹಕ್ಕೆ ಕಳುಹಿಸುವ ಮೂಲಕ, ಒಬ್ಬ ಶ್ರೇಷ್ಠ ಶಿಕ್ಷಕನನ್ನು ಕಳುಹಿಸಿಕೊಟ್ಟಿದ್ದ. ಆ ಮೂಲಕ ಮಾನವ ಸಂಕುಲಕ್ಕೆ ತನ್ನ ಮುಖದ ದರ್ಶನ ಮಾಡಿಸಿದ್ದನು. ಅಂದಿನಿಂದ, ನಮಗೆ– "**ದೇವರು ತಾನೇ ಯೇಸುಕ್ರಿಸ್ತನ ಮುಖದಲ್ಲಿ ತೋರುವ ದೇವಪ್ರಭಾವಜ್ಞಾನ**"ವನ್ನು ಕಾಣುವ ಸೌಭಾಗ್ಯ ನಮ್ಮದಾಗಿದೆ (2 ಕೊರಿಂಥ 4:6).

ಶ್ರೇಷ್ಠ ಶಿಕ್ಷಕನು ಭೂಮಿಗಿಳಿದು ಬರುವುದನ್ನು ಕಾಯುತ್ತಿರುವ ನಾವು, ಆತನಿಂದ ಕಲಿಯುವುದೇನು?

**ಭಾನುವಾರ** **ಅಕ್ಟೋಬರ್ 25**

## ತಂದೆಯನ್ನು ಪ್ರಕಟಿಸುವುದು

**ಇಬ್ರಿಯರ ಪತ್ರಿಕೆಯ ಪೀಠಿಕೆಯಲ್ಲಿ ಕ್ರಿಸ್ತನನ್ನು ಕುರಿತು ಅಪೋಸ್ತಲನು ಬರೆದ ಅಂಶಗಳಲ್ಲಿ ಬಹುಮುಖ್ಯವಾದ ಅಂಶಗಳಾವುವು?** (ಇಬ್ರಿ 1:1–4)

ಹೊಸ ಒಡಂಬಡಿಕೆಯ ಬರಹಗಾರರು ಮತ್ತೆಮತ್ತೆ ಈ ಮಹತ್ವಕಾರಿ ಆಲೋಚನೆಯನ್ನು ಪುನರುಚ್ಚಾರ ಮಾಡಿದ್ದಾರೆ: ಯೇಸುಕ್ರಿಸ್ತನು ಪರಲೋಕದ ತಂದೆ ಯಾರು ಎಂಬುದನ್ನು ಮಾನವರಿಗೆ ತೋರಿಸಲು ಈ ಲೋಕಕ್ಕೆ ಇಳಿದು ಬಂದಿದ್ದನು. ಹಿಂದಿನ ಕಾಲಗಳಲ್ಲಿ ದೇವರ ಪ್ರಕಟನೆಯು ಭಾಗಭಾಗವಾಗಿ

ಪ್ರವಾದಿಗಳ ಮುಖಾಂತರ ಬಂದಿತ್ತು; ಅಂತಿಮ ಹಾಗೂ ಸಂಪೂರ್ಣವಾದ ದೇವರ ಪ್ರಕಟನೆಯು ಯೇಸುಕ್ರಿಸ್ತನ ಮೂಲಕ ಬಂದಿತು.

ಅಲ್ಲದೆ ಯೇಸು, ದೇವರ ಪ್ರತಿರೂಪಿ, ಆದ್ದರಿಂದಲೇ ಯೇಸುಕ್ರಿಸ್ತನನ್ನು ಕುರಿತು ವೇದವು– "**ಈತನು ದೇವರ ಪ್ರಭಾವದ ಪ್ರಕಾಶವೂ ಆತನ ತತ್ವದ ಮೂರ್ತಿಯೂ**" ಎಂದು ಹೇಳಿದೆ (ಇಬ್ರಿ 1:3). ಪಾಪಮಯ ಮಾನವರಾದ ನಮಗೆ ದೇವರ ಮಹಿಮೆಯನ್ನು ನೋಡುವುದು ಸಾಧ್ಯವಾಗಿರಲಿಲ್ಲ. ನರಾವತಾರದಲ್ಲಿ ಬಂದ ಆತನ ಕುಮಾರ, ಯೇಸು, ದೇವರಮಹಿಮೆಯನ್ನು ಪ್ರತಿಬಿಂಬಿಸುತ್ತಿದ್ದಾನೆ. ದೇವರ ಮಹಿಮೆ ಕ್ರಿಸ್ತನು ಧರಿಸಿದ ಮಾನವ ದೇಹಕ್ಕೆ ಇಳಿದು ಬಂದಿದೆ. ಆದ್ದರಿಂದ ಈಗ ನಾವು ದೇವರ ಮಹಿಮೆಯನ್ನು ನೋಡುವುದು ಮತ್ತು ದೇವರ ಗುಣನಡವಳಿಕೆಯನ್ನು ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳುವುದು ಸಾಧ್ಯವಾಯಿತು.

ಯೇಸು "**ಆತನ ತತ್ವದ ಮೂರ್ತಿ**" (ಇಬ್ರಿ 1:3). ಇಲ್ಲಿ, "ಗುಣಾಡಳಿಕೆ"ಗೆ ಗ್ರೀಕ್ ಭಾಷೆಯ ಪದ ಪ್ರಯೋಗವಾಗಿದೆ. ಆ ಪದ "**ಮುದ್ರೆ**", "**ಗುರುತು**" "**ಠಸ್ಸೆ**" ಎಂಬ ಅರ್ಥವನ್ನು ಕೊಡುತ್ತಿದೆ. ಮೇಣದ ಮೇಲೆ ಹಾಕುವ ಮುದ್ರೆ ಅಥವಾ ನಾಣ್ಯದ ಮೇಲಿನ ಮುದ್ರಣ ಇದಕ್ಕೆ ಉತ್ತಮ ನಿದರ್ಶನ. ಆದ್ದರಿಂದಲೇ ಯೇಸು ಕ್ರಿಸ್ತನನ್ನು– "**ದೇವರ ಪ್ರಭಾವದ ಪ್ರಕಾಶ**" ಎಂದು ಕರೆಯಲಾಗಿದೆ (ಇಬ್ರಿ 1:3).

ನಾವು ತಂದೆಯನ್ನು ಸರಿಯಾಗಿ ಅರಿಯ ಬಯಸಿದರೆ, ತಂದೆಯನ್ನು ಕುರಿತು ನಮ್ಮ ಶ್ರೇಷ್ಠ ಗುರು (ಯೇಸು) ಏನು ಹೇಳುತ್ತಾನೆ ಎಂಬುದನ್ನು ಬಹು ಜಾಗರೂಕತೆಯಿಂದ, ಎಚ್ಚರಿಕೆಯಿಂದ ಕೇಳಬೇಕು. ನಮ್ಮ ಶ್ರೇಷ್ಠ ಶಿಕ್ಷಕನನ್ನು ಬಹು ಎಚ್ಚರದಿಂದ ಗಮನಿಸುತ್ತಿದ್ದರೆ, ಆತನಲ್ಲಿ ನಾವು ತಂದೆಯನ್ನು ನೋಡಬಹುದು.

**ಇಬ್ರಿಯ 1:1–4 ವಚನಗಳನ್ನು, 2 ಕೊರಿಂಥ 4:1–6 ವಚನಗಳೊಂದಿಗೆ ಹೋಲಿಸಿ ನೋಡಿರಿ. 2 ಕೊರಿಂಥ 4:1–6ರ ಪ್ರಕಾರ ಯೇಸು ಯಾರು? ಮತ್ತು ಆತನಿಂದ ನಾವು ಕಲಿಯುವುದೇನು?**

ದೇವರನ್ನು ಕುರಿತು ಅವರು ಬೇರೆಯವರಿಗೆ ಶಿಕ್ಷಣ ಕೊಡುತ್ತಿದ್ದರು. ಪೌಲ ಮತ್ತು ಅವನ ಸಂಗಡಿಗರು, ಯೇಸು, ತನ್ನ ತಂದೆಯ ಕುರಿತು ಮಾಡುತ್ತಿದ್ದ ಬೋಧನೆಯ ಮೂಲದ ದೇವರ ಸೇವೆಯನ್ನೇ ತಮ್ಮ ಸೇವೆಯಲ್ಲಿ ಪ್ರತಿಫಲಿಸುತ್ತಿದ್ದರು. ಯೇಸು, "**ದೇವರ ಪ್ರತಿರೂಪವಾಗಿ**" (2 ಕೊರಿಂಥ 4:4) ನಮಗೆ ತಂದೆಯಾದ ದೇವರ ಜ್ಞಾನವನ್ನು ತಿಳಿಸಿಕೊಟ್ಟನು. ಕ್ರಿಸ್ತನ ಮಾದರಿಯನ್ನೇ ಅನುಸರಿಸುವ ಪೌಲನು, ದೇವರ ವಾಕ್ಯ ವಿರೂಪಗೊಳಿಸುವುದನ್ನು ಮತ್ತು ವಾಕ್ಯಕ್ಕೆ ಅಪಚಾರವಾಗುವುದನ್ನು ತಡೆಯುತ್ತಾನೆ ಮತ್ತು ದೇವರ ವಾಕ್ಯವನ್ನು ಕೆಡಿಸದೆ ಸತ್ಯವನ್ನು ಪರಿಷ್ಕಾರವಾಗಿ ಬೋಧಿಸುತ್ತಾನೆ (2 ಕೊರಿಂಥ 4;2).

ದೇವರು ಆದಿಯಲ್ಲಿ ಕತ್ತಲೆಯನ್ನು ಓಡಿಸಲು ಬೆಳಕನ್ನು ಬಳಸಿದಂತೆಯೇ, ಈ ಕಾಲದಲ್ಲಿ ತನ್ನನ್ನು ಕುರಿತು ಹೇಳಲಾಗುವ ತಪ್ಪಾದ ಬೋಧನೆಗಳನ್ನು ಹೋಗಲಾಡಿಸಲು ಆತನು ನಮಗೆ ತನ್ನ ಮಗ, ಯೇಸುವನ್ನು ಕೊಟ್ಟಿದ್ದಾನೆ. ಆ ಯೇಸು, ದೇವರ ಕುರಿತ ಸತ್ಯವನ್ನು ನಮಗೆ ತಿಳಿಸಿಕೊಟ್ಟಿದ್ದಾನೆ. "**ಯೇಸು ಕ್ರಿಸ್ತನ ಮುಖದಲ್ಲಿ**" ತಾನೇ ನಾಮ ದೇವರನ್ನು ಕುರಿತು ಸ್ಪಷ್ಟವಾದ ಜ್ಞಾನವನ್ನು ಪಡೆದುಕೊಳ್ಳುತ್ತೇವೆ (2 ಕೊರಿಂಥ 4:6).

**ಯೇಸು, ತಂದೆಯನ್ನು ಖಚಿತವಾಗಿ ಪ್ರತಿಬಿಂಬಿಸಿದ್ದನು. ಹಾಗೆಯೇ ನಮಗೂ ಸಹ– "ದೇವರ ಪ್ರಿಯರಾದ ಮಕ್ಕಳಿಗೆ ತಕ್ಕ ಹಾಗೆ ಆತನನ್ನು ಅನುಸರಿಸುವವರಾಗಿರಿ" ಎಂಬ ಆಹ್ವಾನ ಕೊಡಲಾಗಿದೆ (ಎಫೆಸ 5:1). ಈ ವಾಕ್ಯದ ಅರ್ಥವೇನು? ದೇವರನ್ನು "ಅನುಸರಿಸುವವರಾಗಿ" ಆಗುವುದು ಹೇಗೆ ಎಂಬುದಕ್ಕೆ ಯೇಸುವಿನಿಂದ ನಾವು ಕಲಿಯುವುದೇನು?**

**ಸೋಮವಾರ** **ಅಕ್ಟೋಬರ್ 26**

## ತಂದೆಯನ್ನು ಪ್ರಕಟಿಸುವುದು (ಮುಂದುವರಿದಿದೆ)

ಯೋಹಾನ ತನ್ನ ಸುವಾರ್ತೆಗೆ ದೀರ್ಘ ಪೀಠಿಕೆ ಬರೆಯುತ್ತಾ (ಯೋಹಾನ 1:1–18). ಯೇಸುಕ್ರಿಸ್ತನನ್ನು ನಿತ್ಯ "ವಾಕ್ಯ" ಎಂದು ಚರ್ಚೆ ಮಾಡುತ್ತಾ

ಹೋಗುತ್ತಾನೆ. ಕ್ರಿಸ್ತನನ್ನು, ದೇವರ ಕುಮಾರನೆಂದೂ, ಸ್ವತಃ ದೇವರೆಂದು, ಹಕ್ಕಿನಿಂದ ಸಾಧಿಸುವಿಕೆಗೆ ಎಲ್ಲೆಯಿಲ್ಲ. ಅದು ಸೀಮಾತೀತವಾದುದು. ಅವು ಧೈರ್ಯದ ಮಾತುಗಳು. ಮಾತಿನಲ್ಲಿ ಭಯವಿಲ್ಲ ವಿಶ್ವವ್ಯಾಪಿಯಾದ ಮಾತುಗಳವು. ಜಗದುತ್ಪತ್ತಿಗೆ ಮೊದಲೇ ಆತನಿದ್ದ. ಆತನಿಂದಲೇ ಸಮಸ್ತವು ಉಂಟಾಯಿತು (John 1:2,3). ಆತನು ಮನುಷ್ಯರಿಗೆ ಬೆಳಕಾಗಿದ್ದನು (John 1:4). ವಾಕ್ಯವು ಲೋಕಕ್ಕೆ ಬಂದಿತ್ತು, ಆ ಬೆಳಕೇ ಪ್ರತಿ ಮನುಷ್ಯನಿಗೂ ಬೆಳಕನ್ನು ಕೊಡುವಂಥದ್ದಾಗಿತ್ತು (ಯೋಹಾನ 1:9).

ಯೋಹಾನನ ಪ್ರಕಾರ, ಕ್ರಿಸ್ತನು ಮಾನವನಾಗಿ ಬಂದದ್ದರ ಫಲಿತಾಂಶವೇನು? ವಾಕ್ಯನಾಗಿ ಬಂದಾತನು, ಎಂತಹ ಬೆಳಕನ್ನು ಈ ಲೋಕಕ್ಕೆ ತಂದನು? ಹಾಗೆ ತರುವುದಕ್ಕೆ ಅವನಿಗಿದ್ದ ಅರ್ಹತೆಗಳಾವುವು? ಯೋಹಾನ 1:14,18.

**"ಲೋಕದ ಕತ್ತಲು ತುಂಬಾ ಅಗಾಧವಾದಾಗ ಬೆಳಕು ಮೂಡಿ ಬಂದಿತ್ತು...."** ಆದರೆ ಮಾನವರಿಗೆ ಒಂದು ನಿರೀಕ್ಷೆಯಿತ್ತು.... ಆ ನಿರೀಕ್ಷೆಯೇ: ಲೋಕಕ್ಕೆ ದೇವರ ಜ್ಞಾನವನ್ನು ಪುನಃಸ್ಥಾಪನೆ ಮಾಡಿತ್ತು.

"ಕ್ರಿಸ್ತನು ಆ ಜ್ಞಾನವನ್ನು ಪುನಃಸ್ಥಾಪನೆಮಾಡುವುದಕ್ಕಾಗಿಯೇ ಬಂದಿದ್ದನು. ತಮಗೆ ದೇವರು ಗೊತ್ತೆಂದು ಆತನ ಬಗ್ಗೆ ತಪ್ಪಾಗಿ ಬೋಧನೆ ಮಾಡಿ ಆತನನ್ನು ತಪ್ಪಾಗಿ ಪ್ರತಿನಿಧಿಸುತ್ತಿದ್ದವರ ಬಣ್ಣ ಬಯಲು ಮಾಡಲು ಬಂದಿದ್ದನು. ದೇವರಾಜ್ಞೆಯ ಪ್ರಕೃತಿಯನ್ನು ರುಜುವಾತು ಪಡಿಸಲು ಸಹ ಬಂದಿದ್ದನು. ತನ್ನ ಪವಿತ್ರವಾದ ಗುಣವನ್ನು ಪ್ರಕಟಿಸಲು ಆತ ಬಂದಿದ್ದನು" – ಎಲೆನ್ ಜಿ ವೈಟ್, ಎಜುಕೇಷನ್, ಪುಟ 74–76.

"ಕ್ರಿಸ್ತನು ತನ್ನ ಜೀವನದಲ್ಲಿ ಏನೆಲ್ಲಾ ಮಾಡಿದ್ದನೋ ಅದೆಲ್ಲ ಒಂದೇ ಒಂದು ಉದ್ದೇಶಕ್ಕಾಗಿ: ಮಾನವೀಯತೆಯನ್ನು ಉನ್ನತೀಕರಿಸಲು ದೇವರನ್ನು ಪ್ರಕಟಿಸುವುದೇ ಆ ಉದ್ದೇಶ". ಎಜುಕೇಷನ್, ಪುಟ 82.

**ಯೇಸುಸ್ವಾಮಿಯವರು ತಾವೇ ಈ ಮಾತನ್ನು ಹೇಳಿದ್ದಾರೆ: "ನನ್ನನ್ನು ನೋಡಿದವನು ತಂದೆಯನ್ನು ನೋಡಿದ್ದಾನೆ" (ಯೋಹಾನ 14:9). ಈ ವಾಕ್ಯದ ಹಿನ್ನೆಲೆ ಏನಾಗಿತ್ತು? ಆತನು ಈ ಹೇಳಿಕೆಯನ್ನು ಹೇಳಿದ್ದು ಏಕೆ? ಯೋಹಾನ 14:1–4.**

---

---

ಫಿಲಿಪ್ಪನ ತಪ್ಪಾದ ಹೇಳಿಕೆಯನ್ನು ಟೀಕೆ ಮಾಡಬೇಕು ಅಂತನ್ನಿಸಬಹುದು (ಯೋಹಾನ 14:8). ಅಷ್ಟು ವರ್ಷಗಳ ಕಾಲ ಅವನು ಯೇಸುಸ್ವಾಮಿಯೊಂದಿಗೆ ಅನ್ಯೋನ್ಯವಾಗಿ ಒಡನಾಡಿದ್ದರೂ, ಕ್ರಿಸ್ತನ ನರಾವತಾರದ ಬಹುಮುಖ್ಯ ಹಾಗು ಅತ್ಯಾವಶ್ಯ ಸತ್ಯಾಂಶವಾದ ಕ್ರಿಸ್ತನು, ತಂದೆಯ ಗುಣ ಎಂಥದ್ದು ಎಂಬುದನ್ನು ಲೋಕಕ್ಕೆ ತೋರಿಸಲಿಕ್ಕೆ ಬಂದನು ಎಂಬುವದನ್ನು ಅವನು ಗ್ರಹಿಸಿರಲಿಲ್ಲ. ಶ್ರೇಷ್ಠ ಗುರುವಿನ ಒಬ್ಬ ಶಿಷ್ಯ ಬಹಳ ಕಳಪೆ ಸಾಧನೆ ತೋರಿಸಿದ್ದ ಎಂಬುದನ್ನು ಗಮನಿಸಿದ ಇಂದಿನ ಶಿಕ್ಷಕರುಗಳಿಗೆ, ತಮ್ಮ ಶಿಷ್ಯರು, ಕಳಪೆ ಸಾಧನೆ ತೋರಿಸಿದ ವಿಷಯದಲ್ಲಿ ಇದ್ದ ಚಿಂತೆಯನ್ನು ಮರೆತು ನೆಮ್ಮದಿ ಸಿಗಬಹುದು. ಸತ್ಯವೇದದಲ್ಲಿ ಫಿಲಿಪ್ಪನ ಹೇಳಿಕೆಯನ್ನು ದಾಖಲಿಸಿರುವುದು ಅವನನ್ನು ಟೀಕಿಸುವುದಕ್ಕಲ್ಲ, ಆದರೆ ನಮ್ಮ ಹೃದಯಗಳನ್ನು ನಾವು ಪರಿಶೋಧಿಸಿ ನೋಡಿಕೊಳ್ಳಲು ಅದೊಂದು ಸದಾವಕಾಶವಷ್ಟೇ. ನಾವು ಸಹ ಅದೆಷ್ಟು ಕಾಲದಿಂದ ಯೇಸುಸ್ವಾಮಿ ಜೊತೆಯಲ್ಲಿ ಜಿವಿಸುತ್ತಿದ್ದೇವೆ? ಫಿಲಿಪ್ಪನಿಗಿಂತಲೂ ಹೆಚ್ಚಾಗಿ ಅಥವಾ ಇನ್ನೂ ಉತ್ತಮವಾದ ರೀತಿಯಲ್ಲಿ ನಾವು ಯೇಸುಕ್ರಿಸ್ತನನ್ನು ಅರ್ಥಮಾಡಿಕೊಂಡಿದ್ದೇವೆಯೋ? **"ನನ್ನನ್ನು ನೋಡಿದವನು ತಂದೆಯನ್ನು ನೋಡಿದ್ದಾನೆ"**.

**ಮಂಗಳವಾರ** **ಅಕ್ಟೋಬರ್ 27**

## ಶ್ರೇಷ್ಠ ಶಿಕ್ಷಕನ ಮನಸ್ಸು ನೋಡುವುದು

**ಫಿಲಿಪ್ಪಿಯದವರಿಗೆ ಪತ್ರ ಬರೆಯುವಾಗ, ಪೌಲನಿಗೆ ಫಿಲಿಪ್ಪಿಯದಲ್ಲಿದ್ದ ಕ್ರೈಸ್ತ ಸಮುದಾಯದ ಮೇಲಿದ್ದ ಕಾಳಜಿಯಾದರೂ ಏನು? ಫಿಲಿಪ್ಪಿ 2:1–4; ಫಿಲಿಪ್ಪಿ 4:2–3.**

---

ಫಿಲಿಪ್ಪಿ 2:1–11ರವರೆಗಿನ ವಚನಗಳು, ಇಡೀ ಸತ್ಯವೇದದಲ್ಲಿಯೇ ಅತ್ಯಂತ ಆಳವಾದ ವಿಚಾರಧಾರೆಯ ವೇದಭಾಗವಾಗಿದೆ. ಈ ಭಾಗ ಕ್ರಿಸ್ತನ ಪೂರ್ವ ಅಸ್ತಿತ್ವ, ಆತನ ದೈವತ್ವ, ಆತನ ನರಾವತಾರ, ಆತನ ಮಾನವೀಯತೆ, ಶಿಲುಬೆಯ ಮರಣಕ್ಕೆ ಆತನ ಅಂಗೀಕಾರಗಳನ್ನು ಕುರಿತು ಚರ್ಚೆಮಾಡಿದೆ. ಪರಲೋಕದಿಂದ ಕಲ್ವೆರಿಗೆ ಆತನಿಳಿದು ಬಂದ ಬಹುದೂರದ, ಬಹು ಸಂಕಷ್ಟದ, ತಳಮುಖದ ರಸ್ತೆಯ ಪ್ರಮಾಣವನ್ನು ಈ ವೇದಭಾಗ ವಿವರಿಸಿದೆ (ಫಿಲಿಪ್ಪಿ 2:5–8). ಈ ವೇದಭಾಗವು ಯಾವ ರೀತಿಯಾಗಿ ತಂದೆಯು, ಮಗನನ್ನು ವಿಶ್ವವ್ಯಾಪಿ ಆರಾಧನೆಗೆ ಉನ್ನತೀಕರಿಸಿದನು ಎಂಬುದನ್ನೂ ವಿವರಿಸುತ್ತದೆ (ಫಿಲಿಪ್ಪಿ 2:9–11). ಈ ವಚನಗಳಲ್ಲಿ ಬಹಳಷ್ಟು ಮೈ ರೋಮಾಂಚನಗೊಳ್ಳುವಷ್ಟು ಸತ್ಯಗಳನ್ನು ತುಂಬಲಾಗಿದೆ.

**ಪೌಲನು ಫಿಲಿಪ್ಪಿ 2:5–11 ವಚನಗಳ ವೇದಭಾಗವನ್ನು ಹೇಗೆ ಪರಿಚಯಿಸಿದ್ದಾನೆ? ಕ್ರಿಸ್ತನ ಜೀವನದ ಗುಣ–ಸ್ವಭಾವಗಳನ್ನು ವಿವರಿಸುವುದರಲ್ಲಿ ಸಂತೋಷಿಸುವ ಪೌಲನು, ಕ್ರಿಸ್ತನ ಅನುಯಾಯಿಗಳ ಯಾವ ಗುಣ–ಸ್ವಭಾವಗಳನ್ನು ತಮ್ಮ ಜೀವನದಲ್ಲಿ ಪ್ರತಿಫಲಿಸಬೇಕೆಂದು ನಿರೀಕ್ಷಿಸುತ್ತಾನೆ ಎಂಬ ವಿಷಯದಲ್ಲಿ ನಿಮ್ಮ ಚಿಂತನೆ ಏನು?**

ಫಿಲಿಪ್ಪಿಯಲ್ಲಿರುವ ವಿಶ್ವಾಸಿಗಳು ವಾದ ಪ್ರಿಯರು ನಿಜ, ಆದರೂ ಅವರು ಕ್ರಿಸ್ತನ ನರಾವತಾರದಿಂದ ಪಾಠ ಕಲಿಯಬಲ್ಲರೆಂಬುದು ಪೌಲನ ಬಲವಾದ ನಿರೀಕ್ಷೆಯಾಗಿದೆ. ಯೇಸು ಕ್ರಿಸ್ತನು ಮಾನವರೂಪವನ್ನು ಧರಿಸಿಬಂದನು ಎಂದರೆ: **"ದೇವರಿಗೆ ಸರಿಸಮಾನನಾಗಿರುವರೆಂಬ ಅಮೂಲ್ಯ ಪದವಿಯನ್ನು ಬಿಡುಲೊಲ್ಲನು ಎಂದೆಣಿಸದೆ ತನ್ನನ್ನು ಬರಿದು ಮಾಡಿಕೊಂಡು ದಾಸನ ರೂಪವನ್ನು ಧರಿಸಿಕೊಂಡು ಮನುಷ್ಯರಿಗೆ ಸದೃಶನಾದನು"** (ಫಿಲಿಪ್ಪಿ 2:7), ಮಾತ್ರವಲ್ಲ ಶಿಲುಬೆಯ ಮರಣಕ್ಕೂ ತನ್ನನ್ನು ಒಪ್ಪಿಸಿಕೊಟ್ಟನು. ಕ್ರಿಸ್ತನೇ ಹೀಗೆ ತನನ್ನು ತಗ್ಗಿಸಿಕೊಂಡಿರಬೇಕಾದರೆ, ಆತನ ವಿಶ್ವಾಸಿಗಳು, ಒಬ್ಬರು ಇನ್ನೊಬ್ಬರನ್ನು ಪ್ರೀತಿಸಿ, ಅದೆಷ್ಟು ತಗ್ಗಿಬಗ್ಗಿ ನಡೆದುಕೊಳ್ಳಬೇಕಲ್ಲವೇ?

ಶ್ರೇಷ್ಠ ಶಿಕ್ಷಕನಾದ ಯೇಸುಕ್ರಿಸ್ತನಿಂದ ನಾವು ಬಹಳಷ್ಟು ಕಲಿಯಬೇಕೆಂದು ನಮಗೆ ನೆನಪಿಸಲಾಗಿದೆ. ಈ ಲೋಕದಲ್ಲಿ ಆತನು ದೇವರ ಸೇವೆಯಲ್ಲಿದ್ದಾಗ, ಆತನು ಹಂಚಿಕೊಂಡ ಸಂದೇಶಗಳಿಂದ ನಾವು ಕಲಿಯುವುದು ಬಹಳವಿದೆ. ಆತನು ನಡೆಸಿದ ಅನೇಕ ಅದ್ಭುತ ಕಾರ್ಯಗಳಿಂದಲೂ ಮತ್ತು ತನ್ನ ಬಳಿಗೆ ಬಂದವರ ಹತ್ತಿರ ಆತನು ನಡೆದುಕೊಂಡ ರೀತಿಯಿಂದಲೂ ನಾವು ಕಲಿಯಬೇಕಾದ್ದು ಬಹಳವಿದೆ. ಆತನ ಕರುಣೆ ಮತ್ತು ಅನುಕಂಪ ಹಾಗೂ ಭೂಲೋಕದ ಗೋದಲಿಗೆ ಪರಲೋಕದ ಮಹಿಮೆಯನ್ನು ಬಿಟ್ಟುಕೊಡುವುದಕ್ಕೆ ಆತ ಮನಸಾರೆ ಒಪ್ಪಿಕೊಂಡದ್ದು, ನಾವು ನಮ್ಮ ನೆರೆಹೊರೆಯವರ ಹತ್ತಿರ ಎಂತಹ ಸಂಬಂಧ ಇಟ್ಟುಕೊಳ್ಳಬೇಕೆಂಬುದನ್ನು ನಮಗೆ ಕಲಿಸಿಕೊಡಲಿ (ಎಂತಹ ಪಾಠವಿದು ನಮಗೆ!).

ಇದಕ್ಕೆ ವ್ಯತ್ಯಾಸವಾದ ರೀತಿಯಲ್ಲಿದೆ ನಮ್ಮ ಜೀವನ. ಈ ಪ್ರಾಪಂಚಿಕ ಜೀವನದಲ್ಲಿ ನಾವು ನಮ್ಮನ್ನು ಹೊಗಳಿಕೊಳ್ಳುವುದಕ್ಕೆ ಇಷ್ಟಪಡುತ್ತೇವೆ. ನಮ್ಮ ಸಾಧನೆಗಳನ್ನು ತುಂಬಾ ಅಹಂಕಾರದಿಂದ ಹೇಳಿಕೊಂಡು ಬೀಗುತ್ತೇವೆ. ಬೆತ್ಲೆಹೇಮ್‌ನ ಗೋದಲಿ ಮತ್ತು ನಮ್ಮ ಶ್ರೇಷ್ಠ ಶಿಕ್ಷಕನಿಂದ ನಾವು ವಿಭಿನ್ನವಾದ ಪಾಠ ಕಲಿಯುತ್ತೇವೆ. ನಮ್ಮನ್ನು ಹೆಚ್ಚಿಸಿಕೊಳ್ಳುವುದರಿಂದ ಅಲ್ಲ, ದೇವರು ಶಿಕ್ಷಣ ರಂಗದಲ್ಲಿ ಮಾಡಿದ ಮಹಾನ್ ಸಾಧನೆ ಮತ್ತು ರಕ್ಷಣೆಯ ಯೋಜನೆ ನೆರವೇರುತ್ತಿರುವಿಕೆಗಳೆಲ್ಲವನ್ನು ನೋಡಿದಾಗ, ನಾವು ನಮ್ಮನ್ನು ದೇವರ ಮುಂದೆ ತಗ್ಗಿಸಿಕೊಳ್ಳುವುದರಿಂದಲೂ ಮತ್ತು ಇತರರಿಗಾಗಿ ಸೇವಕರ ರೀತಿಯಲ್ಲಿ ಸಹಾಯ ಮಾಡುವುದರಿಂದಲೂ ಪಾಠ ಕಲಿಯುತ್ತೇವೆ.

**ಈಗ ಸದ್ಯಕ್ಕೆ, ನೀವು ಯಾವ ಪರಿಸ್ಥಿತಿಯನ್ನು ಎದುರಿಸುತ್ತಿದ್ದೀರಿ. ಇಂತಹ ಸನ್ನಿವೇಶದಲ್ಲಿಯೂ ನೀವು ನಿಮ್ಮನ್ನು ತಗ್ಗಿಸಿಕೊಂಡು, ಕ್ರಿಸ್ತನನ್ನು ಇತರರಿಗೆ ಪರಿಚಯಿಸಲು ಸಿಕ್ಕಿರುವ ಸದಾವಕಾಶವನ್ನು ಬಲವಾಗಿ ಉಪಯೋಗಿಸಿಕೊಳ್ಳಿರಿ.**

**ಬುಧವಾರ** **ಅಕ್ಟೋಬರ್ 28**

## ಶ್ರೇಷ್ಠ ಶಿಕ್ಷಕ ಮತ್ತು ಸಂಧಾನ

ಮಾನವ ಸಂಬಂಧಗಳು ಎಷ್ಟೋ ಸಲ ಮುರಿದುಬೀಳುತ್ತವೆ. ಆಗ ನಾವು

ಒಬ್ಬರಿಂದಿನ್ನೊಬ್ಬರು ಅಗಲಿಬಿಡುತ್ತೇವೆ; ಸ್ನೇಹಬಿಡುತ್ತೇವೆ. ನಮಗೆ ಆಪ್ತನಾಗಿದ್ದವನು ಇದ್ದಕ್ಕಿದ್ದಂತೆ ಶತ್ರುವಾಗಿಬಿಡುತ್ತಾನೆ. ಆದರೂ ಇಂತಹ ಒಡೆದುಹೋದ ಸಂಬಂಧಗಳನ್ನು ಒಂದುಗೂಡಿಸಬಹುದು. ಹಾಗಾದಾಗ, ನಾವು ಸಂಧಾನದ ಆಶ್ಚರ್ಯಕರ ಅನುಭವವನ್ನು ಪಡೆದುಕೊಳ್ಳುತ್ತೇವೆ.

**ಕ್ರಿಸ್ತನ ನರಾವತಾರ ಮತ್ತು ಆತನ ಶ್ರೇಷ್ಠ ಶಿಕ್ಷಕನ ಪಾತ್ರದ ಹೃದಯ ಭಾಗದಲ್ಲಿ ಸಂಧಾನ ನೆಲೆಸಿರುವುದು ಹೇಗೆ? 2 ಕೊರಿಂಥ 5:16–21.**

---

---

ಒಡೆದುಹೋಗಿದ್ದ ಮಾನವ ಸಂಬಂಧ ಸಂಧಾನದಿಂದ ಸರಿಯಾಗಿಬಿಟ್ಟರೆ ನಾವು ಅದೆಷ್ಟು ಸಂತೋಷಪಡುತ್ತೇವೆ. ಆದರೆ ದೇವರೊಂದಿಗಿನ ಒಡೆದುಹೋದ ಸಂಬಂಧ ಒಂದಾಗಿಬಿಟ್ಟರೆ ಎಂತಹ ಭವ್ಯಾನಂದವನ್ನು ನಾವು ಅನುಭವಿಸುತ್ತೇವಲ್ಲವೇ? 2 ಕೊರಿಂಥ 5:16–21ರಲ್ಲಿ ಪೌಲ, ಯಾರು ಈ ಸಂಧಾನದ ಕಾರ್ಯ ಮಾಡುತ್ತಿದ್ದಾರೆ ಎಂಬುದನ್ನು ಸ್ಪಷ್ಟಪಡಿಸಿದ್ದಾನೆ. ತಂದೆಯಾದ ದೇವರು ಆತನೊಂದಿಗೆ ಮುರಿದುಬಿದ್ದಿರುವ ಸಂಬಂಧವನ್ನು ಜೋಡಿಸುವ ನಾಯಕತ್ವವನ್ನು ವಹಿಸಿಕೊಂಡಿದ್ದಾನೆ. ಈ ಸಂಧಾನವನ್ನು ಆತನು "**ಕ್ರಿಸ್ತನ ಮೂಲಕ**" (2 ಕೊರಿಂಥ 5:18) ನಡೆಯುವಂತೆ ಮಾಡಿದ್ದಾನೆ. ದೇವರು "**ಲೋಕವನ್ನು ಕ್ರಿಸ್ತನಲ್ಲಿ ತನಗೆ ಸಮಾಧಾನಪಡಿಸಿಕೊಳ್ಳುತ್ತಿದ್ದಾನೆ**" (2 ಕೊರಿಂಥ 5:19).

ಈ ಸಂಧಾನದ, ಸಂತೋಷದ ಬಳಕೆದಾರರು ಮಾತ್ರ ನಾವಾಗಿರದೆ, ಆ ಶ್ರೇಷ್ಠ ಗುರುವಿನಿಂದ ನಾವು ಕಲಿಯಬೇಕಾದ್ದು ಬಹಳವಿದೆ. ನರಾವತಾರದಲ್ಲಿ, ಯೇಸುಸ್ವಾಮಿ ಸಂಧಾನದ ಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದಾನೆ. ನಮ್ಮನ್ನು ಸಹ ಅದರಲ್ಲಿ ಭಾಗಿಗಳಾಗಲು ಆಹ್ವಾನ ನೀಡಲಾಗಿದೆ. ದೇವರು, ಕ್ರಿಸ್ತನ ಮೂಲಕ ನಮ್ಮೊಂದಿಗೆ ಸಂಧಾನ ಮಾಡಿಕೊಂಡಿದ್ದಾನೆ. ಈಗ ನಮಗೆ, ಪೌಲನ ಜೊತೆಗೆ, "**ಆತನು ಕ್ರಿಸ್ತನ ಮೂಲಕ ನಮ್ಮನ್ನು ತನಗೆ ಸಮಾಧಾನ ಪಡಿಸಿಕೊಂಡು ಸಮಾಧಾನ ವಿಷಯವಾದ ಸೇವೆಯನ್ನು ನಮಗೆ ಅನುಗ್ರಹಿಸಿದ್ದಾನೆ**" (2 ಕೊರಿಂಥ 5:18).

ಕೊಲೊಸ್ಸೆ 1:15–20ರಲ್ಲಿರುವ ವಚನಗಳು ಕ್ರಿಸ್ತನ ನರಾವತಾರಕ್ಕೆ ಕೊಡಲ್ಪಟ್ಟಿರುವ ಬಹುದೊಡ್ಡ ವೇದಭಾಗವಾಗಿದೆ. ಇದೊಂದು ಗೀತೆಯೋಪಾದಿಯಲ್ಲಿದೆ. ಈ ಗೀತೆಯ ಮೊದಲ ಅರ್ಧಭಾಗ, ಸೃಷ್ಟಿಯಲ್ಲಿ ಕ್ರಿಸ್ತನ ಪಾತ್ರವನ್ನು ಕುರಿತು ಚರ್ಚಿಸುತ್ತದೆ (ಕೊಲೊಸ್ಸೆ 1:15–17). ಉಳಿದರ್ಧ ಭಾಗ ರಕ್ಷಣೆಯಲ್ಲಿ ಕ್ರಿಸ್ತನ ಪಾತ್ರವನ್ನು ಕುರಿತು ಚರ್ಚಿಸಿದೆ (ಕೊಲೊಸ್ಸೆ 1:18–20). ಕ್ರಿಸ್ತನ, ಸೃಷ್ಟಿಕರ್ತ ವಿಮೋಚಕನ ಪಾತ್ರದ ಮೂಲಕ, ದೇವರು ಎಲ್ಲವನ್ನೂ ತನ್ನೊಂದಿಗೆ ಸಮಾಧಾನ ಮಾಡಿಕೊಳ್ಳುತ್ತಿದ್ದಾನೆ. ಕ್ರಿಸ್ತನ ಮೂಲಕ ದೇವರು ಸಾಧಿಸುವ ಸಂಧಾನದ ಕೆಲಸ ವಿಶ್ವವ್ಯಾಪಿಯಾಗಿದ್ದು, "**ಆತನು ಶಿಲುಬೆಯ ಮೇಲೆ ಸುರಿಸಿದ ರಕ್ತದಿಂದ ತಾನು ಸಮಾಧಾನವನ್ನು ಉಂಟುಮಾಡಿ ಭೂಪರಲೋಕಗಳಲ್ಲಿರುವ ಸಮಸ್ತವನ್ನೂ ಆತನ ಮೂಲಕ ತನಗೆ ಸಮಾಧಾನಪಡಿಸಿಕೊಳ್ಳಬೇಕೆಂತಲೂ ನಿಷ್ಕರ್ಷೆ ಮಾಡಿದನು**" (ಕೊಲೊಸ್ಸೆ 1:20).

ಶ್ರೇಷ್ಠ ಗುರು ಸಂಧಾನಕಾರನಾಗಿ ವಿಶ್ವವ್ಯಾಪಿಯ ಮಟ್ಟದಲ್ಲಿ ಕೆಲಸ ಮಾಡುವ ಆತನನ್ನು ಸಮೀಪಿಸುವ ಶಕ್ತಿ ನಮಗಿಲ್ಲ. ಆದರೆ ನಮ್ಮನ್ನು ನಮ್ಮ ಸೀಮಿತ ಮಟ್ಟದಲ್ಲಿಯೇ, "**ಸಮಾಧಾನ ವಿಷಯವಾದ ಸೇವೆಯನ್ನು ನಮಗೆ ಅನುಗ್ರಹಿಸಿದ್ದಾನೆ**" (2 ಕೊರಿಂಥ 5:18). ಯೇಸು ಪ್ರಾರ್ಥನೆ ಮಾಡುತ್ತಿದ್ದಾಗ– "**ನೀನು ನನ್ನನ್ನು ಲೋಕಕ್ಕೆ ಕಳುಹಿಸಿಕೊಟ್ಟಂತೆ ನಾನೂ ಇವರನ್ನು ಲೋಕಕ್ಕೆ ಕಳುಹಿಸಿಕೊಟ್ಟೆನು**" ಎಂದು ಪ್ರಾರ್ಥಿಸಿದಾಗ, ನಮ್ಮನ್ನು ಸೇವೆಯಲ್ಲಿ ಉಪಯೋಗಿಸಿಕೊಳ್ಳುವುದು ಆತನ ಮನಸ್ಸಿನಲ್ಲಿತ್ತು.

**ದೇವರ ಸಂಧಾನಕಾರನ ಪಾತ್ರಕ್ಕೆ ನಾವು ಯಾವೆಲ್ಲಾ ರೀತಿಯಲ್ಲಿ ಪ್ರಾಯೋಗಿಕವಾಗಿ ಸ್ಪಂದಿಸಬಹುದು? ಈಗ ಏನಾದರೂ ಸಂಧಾನ ಮಾಡಬೇಕಾದ ಸನ್ನಿವೇಶಗಳೇನಾದರೂ ಇದ್ದರೆ, ಜನರಿಗೆ ನೀವು ಹೇಗೆ ಸಹಾಯ ಮಾಡುವಿರಿ?**

**ಗುರುವಾರ** **ಅಕ್ಟೋಬರ್ 29**

## ಶ್ರೇಷ್ಠ ಗುರುವಿನ ಪ್ರಥಮ ವಿದ್ಯಾರ್ಥಿಗಳು

ಒಂದು ಗಳಿಗೆ ಅವರು ಪಟ್ಟಣದ ಹೊರಗೆ ಕುರಿಮೇಯಿಸುತ್ತಿರುವ ಕುರುಬರಾಗಿರುತ್ತಾನೆ. ಮತ್ತೊಂದು ಗಳಿಗೆಯಲ್ಲಿ ಆಕಾಶದ ಪ್ರಕಾಶಮಾನರಾಗಿ

ಇಳಿದುಬರುವ ದೇವದೂತರುಗಳನ್ನು ಸ್ವಾಗತಮಾಡಿ, ಅವರು ನೀಡುವ ಆಶ್ಚರ್ಯಕರ ಇಡೀ ಭೂಮಂಡಲವನ್ನೇ ನಡಗಿಸುವ ಸುದ್ದಿಯನ್ನು ಸ್ವೀಕಾರ ಮಾಡಿಕೊಳ್ಳುವ ಕುರುಬರೂ ಆಗಿರುತ್ತಾರೆ. ಅಂತಹ ಪ್ರಕಾಶಮಾನ ನೋಟದಿಂದ ಪ್ರೇರಿತರಾದ ಇವರು, ದೇವದೂತರಿಂದ ಘೋಷಿಸಲ್ಪಟ್ಟ ಶಿಶುವಿನ ದರ್ಶನ ಮಾಡಲು ಹೊರಟು ನಿಲ್ಲುತ್ತಾರೆ.

**ಆ ಕುರುಬರ ಜೊತೆ ನಿಂತುಕೊಂಡು, ಗೋದಲಿ ಮೇಲೆ ಮಲಗಿಕೊಂಡಿರುವ ಮಗುವಿನೆಡೆ ನೀವು ನೋಡುತ್ತಿರುವಂತೆ ಕಲ್ಪನೆ ಮಾಡಿನೋಡಿ? ನೀವು ನೋಡುತ್ತಿರುವುದೇನು? ಲೂಕ 2:8–20.**

___

___

ಶ್ರೇಷ್ಠ ಗುರುವಿನ ಪ್ರಥಮ ವಿದ್ಯಾರ್ಥಿಗಳಾದ ಯೋಸೇಪ, ಮರಿಯಳು ಮತ್ತು ಕುರುಬರನ್ನು ನಿಜವಾಗಿಯೂ ಶ್ಲಾಘಿಸಬೇಕು. ಯೇಸುಕ್ರಿಸ್ತನ ಜನನದ ದೈನ್ಯತೆಯ ಪರಿಸ್ಥಿತಿ ನರಾವತಾರದ ವಿಸ್ಮಯದ ಸೂಚನೆಯಲ್ಲೇ ಕೊಡುವುದಿಲ್ಲ. ಆ ವಿಸ್ಮಯವೇನೆಂದರೆ: ಈ ಶಿಶುವಿನ ರೂಪದಲ್ಲಿ ದೇವರು ಮಾನವರೊಂದಿಗೆ ಒಂದಾಗಲು ಬಂದಿದ್ದನು. ಕ್ರಿಸ್ತನ ಪ್ರಥಮ ವಿದ್ಯಾರ್ಥಿಗಳು– ದರ್ಶನಗಳ, ಕನಸುಗಳ ಮತ್ತು ದೇವದೂತರುಗಳ ಸಹಾಯದಿಂದ ಯೇಸುಕ್ರಿಸ್ತನ ಬಾಹ್ಯ ಜಗತ್ತಿನ ಕಾಣಿಸಿಕೊಳ್ಳುವಿಕೆಯಾಚೆಗಿನ ಸಂಗತಿಗಳನ್ನು ಕಾಣಲು ಶಕ್ತರಾದರು. ಕುರುಬರು ಈ ಶಿಶುವಿನ ಅನನ್ಯತೆಯನ್ನು ಬೇರೆಯವರೊಂದಿಗೆ "ಈ ಹೊತ್ತು ನಿಮಗೋಸ್ಕರ ದಾವೀದನೂರಲ್ಲಿ ಒಬ್ಬ ರಕ್ಷಕನು ಹುಟ್ಟಿದ್ದಾನೆ. ಆತನು ಕರ್ತನಾಗಿರುವ ಕ್ರಿಸ್ತನೇ" ಎಂದು ಹಂಚಿಕೊಂಡರು (ಲೂಕ 2:11).

**ಕ್ರಿಸ್ತನ ಜನನದ ಸುದ್ದಿಗೆ ಜೋಯಿಸರು ಹೇಗೆ ಪ್ರತಿಕ್ರಿಯಿಸಿದ್ದರು? ಯೆಹೋದನು ಹೇಗೆ ಪ್ರತಿಕ್ರಿಯಿಸಿದ್ದನು?** ಮತ್ತಾಯ 2:1–12.

___

___

ಕ್ರಿಸ್ತನು ತನ್ನ ಮೊದಲ ಸಾಮ್ಯ ಹೇಳುವ ಮತ್ತು ಅದ್ಭುತ ಕಾರ್ಯವನ್ನು

ಎಸಗುವ ಮೊದಲೇ, ನಮ್ಮ ಶ್ರೇಷ್ಠ ಗುರುವು, ತಾನು ಏನಾಗಿದ್ದಾನೋ ಆ ಕಾರಣಕ್ಕಾಗಿ, ಆತನು ಆರಾಧನೆಗೆ ಯೋಗ್ಯನಾಗಿದ್ದಾನೆ. ಯೇಸುಕ್ರಿಸ್ತನ ನಂತರದ, ದೇವರ ಸೇವೆಯಲ್ಲಿನ ಬೋಧನೆಗಳನ್ನು ಶ್ಲಾಘಿಸುವ ಮುನ್ನ ಪ್ರಥಮ ವಿದ್ಯಾರ್ಥಿಗಳು ಜೋಯಿಸರು ತಮ್ಮ ಶ್ರೇಷ್ಠ ಗುರುವನ್ನು ಆರಾಧನೆ ಮಾಡುತ್ತಿದ್ದಾರಲ್ಲ ಅವರೊಂದಿಗೆ ನಾವು ಸೇರಿಕೊಳ್ಳೋಣ. ಯಾರ ಬೋಧನೆಗಳನ್ನು ನಾವು ಮೆಚ್ಚುತ್ತೇವೋ, ಆತನು ಒಬ್ಬ ಮೇಧಾವಿ ಶಿಕ್ಷಣತಜ್ಞನಿಗಿಂತ ಹೆಚ್ಚಿನವನು. ಆತ ದೇವರ, ತನ್ನ ಮಕ್ಕಳಾದ ಮಾನವರೊಂದಿಗೆ ವಾಸಿಸಲು ಬಂದವನು. ಕ್ರೈಸ್ತೀಯ ಶಿಕ್ಷಣವು ಕ್ರಿಸ್ತನ ಆರಾಧನೆಯಲ್ಲಿ ಬೇರೂರಿದೆ.

ಜೋಯಿಸರು, ಕುರುಬರು ಮತ್ತು ದೇವದೂತರ ಜೊತೆಗೂಡಿ ಕ್ರಿಸ್ತನನ್ನು ನವಜಾತ ರಾಜಕುಮಾರನನ್ನು, ಆರಾಧಿಸಲು ನಮಗೆ ಕರೆ ನೀಡಲಾಗಿದೆ. ಆ ಶಿಶುರೂಪದಲ್ಲಿದ್ದ ಯೇಸುವಿನಲ್ಲಿ ತಂದೆಯಾದ ದೇವರ ವಾಸ್ತವತೆಯನ್ನು ಕಾಣೋಣ.

**ಯೇಸು ಮಾನವಾವತಾರವೆಂದರೆ ಅದು ದೇವರ ಚಾರಿತ್ರ್ಯ ಎಂಬ ವಿಷಯವನ್ನು ಕುರಿತು ಆಲೋಚಿಸಿರಿ. ವಿಶ್ವ – ಅಂದರೆ ನಮ್ಮ ಪರಿಕಲ್ಪನೆಯನ್ನು ಮೀರಿ ಬೃಹತ್ ಆದದ್ದು. ಆ ವಿಶ್ವದ ಸೃಷ್ಟಿಕರ್ತನು ತನ್ನನ್ನು ತಾನು ತಗ್ಗಿಸಿಕೊಂಡು, ಮಾನವರ ನಡುವೆ ಬಂದು, ಕ್ರಿಸ್ತನ ಮೂಲಕ ನಮ್ಮೊಂದಿಗೆ ಜೀವಿಸಿ ಶಿಲುಬೆಯ ಮೇಲೆ ಮರಣಿಸಿ ನಮ್ಮ ಪಾಪಗಳ ನಿಮಿತ್ತ ನಮಗಾಗಬೇಕಾಗಿದ್ದ ಶಿಕ್ಷೆಯನ್ನೆಲ್ಲ ತಾನೇ ಅನುಭವಿಸಿದನು. ಇದು ಅಷ್ಟೊಂದು ಒಳ್ಳೆಯ ಸುದ್ದಿಯಾಗಿರುವುದು ಯಾಕೆ?**

**ಶುಕ್ರವಾರ** **ಅಕ್ಟೋಬರ್ 30**

**ಹೆಚ್ಚಿನ ಚಿಂತನೆ :** ವೈಟಮ್ಮನವರ, ಎಜುಕೇಷನ್ ಪುಸ್ತಕದ ಪುಟ 73 ರಿಂದ 83ರ ತನಕ ಓದಿಕೊಳ್ಳಿರಿ.

"ದೇವರಿಂದ ಕಳುಹಿಸಲ್ಪಟ್ಟ ಶ್ರೇಷ್ಠ ಶಿಕ್ಷಕನಲ್ಲಿಯೇ ಎಲ್ಲಾ ನಿಜವಾದ ಶಿಕ್ಷಣದ ಕೆಲಸ ಕೇಂದ್ರೀಕೃತಗೊಂಡಿದೆ. ಶಿಕ್ಷಣದ ಕೆಲಸವನ್ನು ಆತ ಒಂದು ನೂರ ಎಂಟು ನೂರ ವರ್ಷಗಳ ಹಿಂದೆಯೇ ಸಂಸ್ಥಾಪಿಸಿದ್ದನು. ರಕ್ಷಕನ ಮಾತುಗಳನ್ನು ಕೇಳಿಸಿಕೊಳ್ಳಿರಿ–

"ನಾನು ಮೊದಲನೆಯವನೂ ಕಡೆಯವನೂ ಸದಾ ಜೀವಿಸುವವನೂ ಆಗಿದ್ದೇನೆ". "ನಾನೇ ಆದಿಯೂ ಅಂತವೂ ಪ್ರಾರಂಭವೂ ಸಮಾಪ್ತಿಯೂ ಆಗಿದ್ದೇನೆ" ಪ್ರಕಟನೆ 1:17,18, ಪ್ರಕ 21:6.

"ಅಂತಹ ಶ್ರೇಷ್ಠ ಶಿಕ್ಷಕನ ಸಮ್ಮುಖದಲ್ಲಿ ದೈವಿಕ ಶಿಕ್ಷಣದ ಸದಾವಕಾಶ ಇರುವಾಗ, ಆತನನ್ನು ಬಿಟ್ಟು ಬೇರೊಂದು ಶಿಕ್ಷಣದ ಬೆನ್ನಟ್ಟುವಿಕೆಯಿದೆಯಲ್ಲ ಅದು ದಡ್ಡತನ. ವಿವೇಕವಿಲ್ಲದ ಬುದ್ಧಿವಂತಿಕೆಯ ಹುಡುಕಾಟ: ಸತ್ಯವನ್ನು ನಿರಾಕರಿಸಿ ಸತ್ಯವಂತರಾಗಿದ್ದೀವಿ ಎಂದುಕೊಳ್ಳುವುದು; ಬೆಳಕಿಲ್ಲದೆ ಪ್ರಕಾಶನಾಗಿ ಬೆಳಗುತ್ತೇನೆ ಎಂದುಕೊಳ್ಳುವುದು; ಜೀವಿವಿಲ್ಲದೆ ಬದುಕಬಹುದು ಎಂದುಕೊಳ್ಳುವುದು; ಜೀವಕರವಾದ ನೀರನ್ನು ತೊರೆದು ಹೋಗುವುದು; ಇವೆಲ್ಲ ತೂತಿರುವ ಪಾತ್ರೆಯಲ್ಲಿ ನೀರಿಡಿದಿಡಲು ಪ್ರಯತ್ನಿಸಿದಂತೆಯೇ ಸರಿ.

ಆತನು ಇನ್ನೂ ಆಹ್ವಾನ ಆಗುತ್ತಿದ್ದಾನೆ: "**ಯಾವನಿಗಾದರೂ ನೀರಡಿಕೆಯಿದ್ದರೆ ಅವನು ನನ್ನ ಬಳಿಗೆ ಬಂದು ಕುಡಿಯಲಿ. ನನ್ನನ್ನು ನಂಬಿದವನ ಹೊಟ್ಟೆಯೊಳಗಿಂದ ಶಾಸ್ತ್ರದಲ್ಲಿ ಹೇಳಿರುವ ಪ್ರಕಾರ ಜೀವಕರವಾದ ನೀರಿನ ಹೊಳೆಗಳು ಹರಿಯುವವು**" "**ನಾನು ಅವನಿಗೆ ಕೊಡುವ ನೀರು ಅವನಲ್ಲಿ ಉಕ್ಕುವ ಒರತೆಯಾಗಿದ್ದು ನಿತ್ಯಜೀವವನ್ನು ಉಂಟುಮಾಡುವುದು**" ಯೋಹಾನ 7:37,38; 4:14; ಎಲೆನ್ ಜಿ ವೈಟ್, ಎಜುಕೇಷನ್, ಪುಟ 83.

ಆತ್ಮೀಯ ಶಿಕ್ಷಕ ಶಿಕ್ಷಕಿಯರೇ...... ನಿಮ್ಮ ಕೆಲಸಕ್ಕೆ ಹೆಚ್ಚಿನ ಸಿದ್ಧತೆ ನಡೆಸುವಾಗ, ನಾನು ನಿಮ್ಮ ಗಮನವನ್ನು, ಶಿಕ್ಷಕ-ಶಿಕ್ಷಕಿಯರ ರಾಜಕುಮಾರನ ಮಾತು, ಜೀವನ, ವಿಧಾನಗಳೆಡೆಗೆ ಸೆಳೆಯುತ್ತಿದ್ದೇನೆ. ದಯವಿಟ್ಟು ಆತನೆಡೆಗೆ ಗಮನಕೊಡಿರೆಂದು ಬೇಡಿಕೊಳ್ಳುತ್ತೇನೆ. ಆತನೇ ನಿಮ್ಮ ಆದರ್ಶ. ದೈವಿಕ ಶಿಕ್ಷಕನ ಆತ್ಮವು, ನಿಮ್ಮ ಹೃದಯ ಮತ್ತು ಜೀವನವನ್ನು ತನ್ನ ವಶಕ್ಕೆ ತೆಗೆದುಕೊಳ್ಳುವವರೆಗೆ ಆ ಆದರ್ಶವನ್ನು ಗಟ್ಟಿಯಾಗಿ ಹಿಡಿದುಕೊಳ್ಳಿರಿ, ಮತ್ತು ಆ ಆದರ್ಶದೊಂದಿಗೆ ಬಾಳಿರಿ.

"**ನಾವೆಲ್ಲರೂ ಮುಸುಕುತೆಗೆದಿರುವ ಮುಖದಿಂದ ಕರ್ತನ ಪ್ರಭಾವವನ್ನು ದರ್ಪಣದಲ್ಲಿ ಕಾಣಿಸುತ್ತದೋ ಎಂಬಂತೆ ದೃಷ್ಟಿಸುವವರಾಗಿದ್ದು ಪ್ರಭಾವದಿಂದ**

**ಅಧಿಕ ಪ್ರಭಾವಕ್ಕೆ ಹೋಗುತ್ತಾ ಆ ಪ್ರಭಾವದ ಸಾರೂಪ್ಯವುಳ್ಳವರೇ ಆಗುತ್ತೇವೆ. ಇದು ದೇವರಾತ್ಮನಾಗಿರುವ ಕರ್ತನ ಕೆಲಸಕ್ಕನುಸಾರವಾದದ್ದೇ"** (2 ಕೊರಿಂಥ 3:18).

"ನಿಮ್ಮ ವಿದ್ಯಾರ್ಥಿಗಳ ಮೇಲಿನ ಶಕ್ತಿಯ ಹಿಂದಿನ ರಹಸ್ಯವಿದು. ಆತನನ್ನು ಪ್ರತಿಬಿಂಬಿಸಿರಿ" ಎಜುಕೇಷನ್, ಪುಟ 282.

## ಚರ್ಚಿಸಬೇಕಾದ ಪ್ರಶ್ನೆಗಳು

1. ಶ್ರೇಷ್ಠ ಶಿಕ್ಷಕನ ನರಾವತಾರದ ಮೂಲಕ ಪಾಠ ಕಲಿಯುವ ಆಲೋಚನೆಯನ್ನು ಗಂಭೀರವಾಗಿ ತೆಗೆದುಕೊಳ್ಳುವ ಕ್ರೈಸ್ತೀಯ ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಯಾವ ಮೌಲ್ಯಗಳು ಮತ್ತು ನಡೆಗಳು ಮುಖ್ಯವಾಗುವುವು?

2. ಯೇಸುಕ್ರಿಸ್ತನ ನರಾವತಾರದಲ್ಲಿ ಪ್ರಕಟಗೊಂಡ ದೇವರ ಚಾರಿತ್ರ್ಯ (ಗುಣ–ನಡತೆ)ಯನ್ನು ತಮ್ಮ ಜೀವನದಲ್ಲಿ ಪ್ರತಿಫಲಿಸಲು ಬಯಸುವ ಕ್ರೈಸ್ತೀಯ ಪೋಷಕರು ಮತ್ತು ಶಿಕ್ಷಕ–ಶಿಕ್ಷಕಿಯರಲ್ಲಿ ಉನ್ನತವಾದ ನಿರ್ದಿಷ್ಟಮಾನ ಇರಬೇಕು. ಈ ಉನ್ನತ ನಿರ್ದಿಷ್ಟಮಾನವಿಲ್ಲದಿದ್ದಾಗ ನಾವೇನು ಮಾಡಬೇಕು?

3. ಗುರುವಾರದ ವಾರಾಂತ್ಯದಲ್ಲಿ ಕೇಳಲಾಗಿರುವ ಪ್ರಶ್ನೆಯನ್ನು ತರಗತಿಯಲ್ಲಿ ಚರ್ಚಿಸಿರಿ, ಯೇಸುಕ್ರಿಸ್ತನ ಜನನ, ಜೀವನ ಮತ್ತು ಮರಣ ದೇವರ ಚಾರಿತ್ರ್ಯದ ಬಗ್ಗೆ ನಮಗೆ ಬೋಧಿಸುವುದೇನು? ವಿಶೇಷವಾಗಿ ಶೋಧನೆಗಳು ದೊಡ್ಡ ರೀತಿಯಲ್ಲಿ ಬರುವ ಕಾಲದಲ್ಲಿ ಮೇಲಿನ ಬೋಧನೆ ನಮಗೆ ಸಮಾಧಾನ ಕೊಡುವುದು ಹೇಗೆ?